ಅಧ್ಯಕ್ಷರು : ಅರ್ಜಿಯನ್ನೊಪ್ಪಿಸಲಾಯಿತು.

(ಇ) **ಶ್ರೀ ಕೆ. ಪ್ರಭಾಕರ ಬಂಗೇರರವರ ಅರ್ಜಿ.**

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಅಧ್ಯಕ್ಷರೆ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗೆ ನೇರವಾಗಿ (ಖಾಸಗಿಯಾಗಿ) ಹಾಜರಾಗುವ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸುವ ಬಗ್ಗೆ ಸದನಕ್ಕೆ ಅರ್ಜಿ ಒಪ್ಪಿಸುತ್ತೇನೆ.

ಅಧ್ಯಕ್ಷರು : ಅರ್ಜಿಯನ್ನೊಪ್ಪಿಸಲಾಯಿತು.

ಅಧ್ಯಕ್ಷರು : ಈಗ ಶಾಸನ ರಚನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನೊಂದು ನಿಲುವಳಿ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : ಆಯಿತು ತಾವು ಮಾತನಾಡಿ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ಬೆಂಗಳೂರು ಸುತ್ತಮುತ್ತ ಭೂಸ್ವಾಧೀನದಲ್ಲಿ ಬಹಳಷ್ಟು ಹಗರಣಗಳು ನಡೆದಿರುವ ಬಗ್ಗೆ ಮತ್ತು ನೈಸ್ ಕಂಪನಿಯವರು ಜಾಸ್ತಿ ಭೂಮಿಯನ್ನು ಸ್ವಾದೀನಪಡಿಸಿ ಕೊಂಡಿರುವುದನ್ನು ತನಿಖೆ ಮಾಡಲು ಕಮಿಟಿಯನ್ನು ನೇಮಕ ಮಾಡಿರುವುದರ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಳೆದ ಸಲ ಈ ಶಾಸನಸಭೆಯಲ್ಲಿ ಬೆಂಗಳೂರು ಸುತ್ತಮುತ್ತ ಭೂಮಿಯನ್ನು ಸ್ವಾಧೀನ ಮಾಡಬೇಕಾದರೆ ಬಹಳ ಹಗರಣಗಳು ನಡೆದಿದೆ ಎಂದು ನಾನು ಹೆಚ್ಚು ಮಾತನಾಡಿದ್ದೆ ಮತ್ತು ತಾವೂ ಕೂಡ ಆ ದಿವಸ ಬಹಳ ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಸರ್ಕಾರ ಅಂಥ ಘಟನೆ ಯಾವುದೂ ನಡೆದಿಲ್ಲ, ನಡೆದಿದ್ದರೆ ನಾವು ತನಿಖೆ ಮಾಡಿಸುತ್ತೇವೆ ಎಂದು ಇಲ್ಲಿ ಹೇಳಿ ಆ ದಿವಸ ಏತಕ್ಕೋ ಗೊತ್ತಿಲ್ಲ ಆತುರವಾಗಿ ಓಡಿ ಹೋಗಿಬಿಟ್ಟರು. ಒಂದು ಸಮಾಧಾನ ಅಂದರೆ ಸರ್ಕಾರ ಅದನ್ನು ಒಪ್ಪಿದೆ. ಒಂದು ತಜ್ಞರ ಸಮಿತಿಯನ್ನು ನೇಮಿಸಿ ವರದಿ ತರಿಸಿಕೊಂಡು ಬೆಂಗಳೂರಿನಲ್ಲಿ ಕೆಲವು ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಜಮೀನನ್ನು ಸ್ವಾಧೀನ ಮಾಡಿಸಿಕೊಂಡಿದ್ದು ಸತ್ಯ. ಅದನ್ನು ನಾವು ಬೇರೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಈಗ ಸರ್ಕಾರದವರು ಒಪ್ಪಿದ್ದಾರೆ. ಅದಕ್ಕಾಗಿ ಮಾನ್ಯ ಕೆ.ಸಿ.ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಆಗಿತ್ತು. ಅದರ ವರದಿಯನ್ನು ನಾವು ಇಲ್ಲಿ ಕೊಡಿ ಎಂದು ಕೇಳಿದೆವು. ಅವರು ಕೊಡಲಿಲ್ಲ. ಸಂತೋಷ. ಆದರೆ, ಅದರ ಮೇಲೆ ಒಂದು ಗೌರ್ನಮೆಂಟ್

ಆರ್ಡರ್ ಇಶ್ಯೂ ಆಗಿದೆ. ಕೆ.ಸಿ.ರೆಡ್ಡಿಯವರ ವರದಿಯಲ್ಲಿ ಏನು ಹೇಳಿದ್ದಾರೆ ಅದರಂತೆ ನಾವು ಈ ಜಮೀನುಗಳನ್ನು ರಸ್ತೆಗೆ ಎಷ್ಟು ಬೇಕು ಅಷ್ಟು ಇಟ್ಟುಕೊಂಡು ಉಳಿದಿರುವುದನ್ನು ಕೈಬಿಡುತ್ತೇವೆಂದು ಹೇಳಿರುತ್ತಾರೆ.

ಅಧ್ಯಕ್ಷರು : ತಾವು ನೈಸ್ ಕಂಪನಿಯ ಬಗ್ಗೆ ಹೇಳುತ್ತಿದ್ದಿರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು ಸಾರ್.

ಅಧ್ಯಕ್ಷರು : ಅದರಲ್ಲಿ ಏನು, ಪದೇ ಪದೇ ಅದರ ಬಗ್ಗೆ ಚರ್ಚೆಯಾಗಿದೆ ಅಲ್ಲವೇ .

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ಇಲ್ಲ ನಾನು ಆ ವಿಷಯಕ್ಕೆ ಬರುತ್ತೇನೆ. ಇದಾದ ನಂತರ ಏನಾಗಿದೆ ಎಂದರೆ ಇಲ್ಲಿ ಗೌರ್ನಮೆಂಟ್ ನೋಟಿಫಿಕೇಷನ್ ಇಶ್ಯೂ ಆಗಿಬಿಟ್ಟಿದೆ. ಯಾವ್ಯಾವ ಜಮೀನು ಬಿಡಬೇಕೆಂದು ಇವರ ತಜ್ಞರ ಸಮಿತಿ ಹೇಳಿತ್ತೋ ಸಚಿವ ಸಂಪುಟ ಒಪ್ಪಿದೆ. ಗೌರ್ನಮೆಂಟ್ ಆರ್ಡರ್ ಇಶ್ಯೂ ಆಗಿದೆ. ಪುನಃ ಇವರು ಆ ಜಮೀನನ್ನು ಪೊಜಿಷನ್‌ಗೆ ತೆಗೆದುಕೊಳ್ಳುವುದಕ್ಕೆ ಹೋಗಿದ್ದಾರೆ. ನಾನು ಈಗ ನೈಸ್ ಮ್ಯಾಟರ್‌ಗೆ ಬರುವುದಿಲ್ಲ. ನಾನೇ ಪಿಐಎಲ್ ಹಾಕಿದ್ದೇನೆ. ನನ್ನದೇ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ. ನಾನು ಆ ವಿಷಯವನ್ನು ಎತ್ತಲಿಕ್ಕೆ ಆಗುವುದಿಲ್ಲ. ಇಲ್ಲಿ ನಿನ್ನೆ ಮೊನ್ನೆಯವರೆಗೆ ಸರ್ಕಾರದ ಮಟ್ಟದಲ್ಲಿ ಆಗಿರುವ ಘಟನೆಗಳು ಏನು ಇವೆ. ಸರ್ಕಾರ ತಾತ್ವಿಕವಾಗಿ ಅದನ್ನು ಒಪ್ಪಿ ಒಂದು ಆದೇಶವನ್ನು ಇಶ್ಯೂ ಮಾಡಿದೆ. ಇಂತಹ ಏರಿಯಾದಲ್ಲಿ ಎಲ್ಲಿ ಅಲೈನ್‌ಮೆಂಟ್ ಇದೆ, ಎಲ್ಲಿ ಅಲೈನ್‌ಮೆಂಟ್‌ಗೆ ಸೂಕ್ತವಾಗಿ ಬರಬೇಕಾಗಿತ್ತೋ ಅಷ್ಟನ್ನು ತೆಗೆದುಕೊಂಡು ಮಿಕ್ಕಿದ್ದನ್ನು ವಾಪಸ್ಸು ಕೊಡುತ್ತಿದೆ ಎಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಇದರಲ್ಲಿ ಅನೇಕ ಜಮೀನುಗಳು ಅಲೈನ್‌ಮೆಂಟ್‌ನಿಂದ ಆಚೆ ಇವೆ. ಅವರು ಅಲ್ಲಿ ಇರಲಿಲ್ಲ. ನಾನು ಎರಡು ಮೂರು ಸಲ ಪ್ರಯತ್ನ ಮಾಡಿದೆ, ತಾವು ಆಗಲೇ ಹೇಳುತ್ತೇವೆ ಎಂದು ಹೇಳಿದಿರಿ. ಈ ಸಭೆಗೆ ಅವರು ರಿಪೋರ್ಟ್ ಕೊಡಲಿಲ್ಲ. ಅದೊಂದು ಎಕ್ಸಿಕ್ಯೂಟಿವ್ ಡಿಷಿಷನ್ ನಾವು ಬೇರೆ ಮಾರ್ಗದಲ್ಲಿ ನೋಟೀಸ್ ಕೊಟ್ಟು ತರಿಸಿಕೊಳ್ಳಲಿಕ್ಕೆ ಆಗಲಿಲ್ಲ. ಆದರೆ ಇವತ್ತು ನಾನೇಕೆ ಎದ್ದಿದ್ದೇನೆ ಎಂದರೆ, ನಿನ್ನೆ ಹೈ ಕೋರ್ಟ್ ಮುಂದೆ ಇವರು ಅಫಿಡೆವಿಟ್ ಹಾಕಿದ್ದಾರೆ. ಇವತ್ತು ಕರ್ನಾಟಕ ರಾಜ್ಯ ಸರ್ಕಾರ ಬಹಳ ದುರದೃಷ್ಟಕರವಾದ ಪರಿಸ್ಥಿತಿಯಲ್ಲಿ ಇದೆ ಎಂದು ಹೇಳಬೇಕಾಗುತ್ತದೆ. ಈ ನಾಡಿನ ಜನ ಈ ರಾಜ್ಯ ಸರ್ಕಾರ ನಡೆದಿರುವ ಸ್ಥಿತಿಯನ್ನು ನೋಡಿ ತಲೆ ತಗ್ಗಿಸಬೇಕಾಗಿದೆ. ಇದರಲ್ಲಿ ಎರಡು ಮಾತಿಲ್ಲ. ಇಲ್ಲಿ

ನಾನು ಮೆರಿಟ್ ಆಫ್ ದಿ ಕೇಸ್ ಬಗ್ಗೆ ಮಾತನಾಡುತ್ತಿಲ್ಲ. ಏನು ಅಫಿಡೆವಿಟ್ ಅನ್ನು ಕ್ಯಾಬಿನೆಟ್ ಅಪ್ರೂವ್ ಮಾಡಿದ ಮೇಲೆ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಕೋರ್ಟಿನ ಮುಂದೆ ಏನು ಮಂಡಿಸಿದ್ದಾರೆ ಅದನ್ನು ಯಾರಾದರೂ ಘನತೆ ಇರುವವರು ಓದಿಬಿಟ್ಟರೆ ಸರ್ಕಾರ ಹೀಗೆ ನಡೆಯುತ್ತಿದೆಯೇ? ಎಂದು ಕೊಳ್ಳುತ್ತಾರೆ. ಅರ್ಥಮಿಟಿಕಲ್ ಡಿಫರೆನ್ಸ್‌ನಲ್ಲಿ ಮ್ಯಾಥಮೆಟಿಕಲ್ ವ್ಯತ್ಯಾಸದಲ್ಲಿ ಜಾಸ್ತಿ ಜಮೀನು ಕೊಟ್ಟಿದ್ದೇವೆಂದು ಅಫಿಡೆವಿಟ್ ಹೋಗಿದೆ. ನಮಗೂ ಕಂಪನಿಗೂ ಸಂಬಂಧವಿಲ್ಲವೆಂದು ಅಫಿಡೆವಿಟ್‌ನಲ್ಲಿ ಹೋಗಿದೆ. ಇದು ಈ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ. We have nothing to do with NICEL ಎಂದು ಹೇಳಿ ಬಿಟ್ಟಿದ್ದಾರೆ. ರಾಜ್ಯದಲ್ಲಿ ಇದು ಏನು ನಡೆಯುತ್ತದೆ? ಇದಕ್ಕೆ ಯಾರು ಜವಾಬ್ದಾರರು? ಇದು ಹೇಗೆ ನಡೆಯಿತು? ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೆ? ಯಾರ ಮನೆಯ ಆಸ್ತಿ ಎಂದು ಈ ರೀತಿ ಆಗಿದೆ? ಈ ಪ್ರಶ್ನೆಯನ್ನು ನಾನು ಇಂದು ಎತ್ತಲೇಬೇಕಾಗಿದೆ. ಎತ್ತದೇ ಹೋದರೆ ನನ್ನ ಹಕ್ಕಿಗೆ ಚ್ಯುತಿಯಾಗುತ್ತದೆ. ಮಾಧುಸ್ವಾಮಿಯವರು ಅಷ್ಟೆಲ್ಲಾ ಮಾತನಾಡಿ ಮತ್ತೆ ಏತಕ್ಕೆ ಸುಮ್ಮನೆ ಆಗಿಬಿಟ್ಟರು ಇದರಲ್ಲಿ ಏನು ಇದೆ ಎಂದು ಹೇಳಿ. ಜನ ಮಾತನಾಡಿಕೊಳ್ಳುತ್ತಾರೆ ಬೆಂಗಳೂರು ಸುತ್ತ ಮುತ್ತ ನಡೆಯಬಾರದಷ್ಟು ಹಗರಣಗಳು ನಡೆಯುತ್ತಿವೆ. ಇವತ್ತು ಬೆಂಗಳೂರಿನಲ್ಲಿ ಬಹಳ ಬೇಗ ಶ್ರೀಮಂತರಾಗಬೇಕೆಂದರೆ, ಒಂದೇ ಒಂದು ವಿಷಯದಲ್ಲಿ ಸ್ಕೋಪ್ ಇರುವುದು. ಭೂಮಿಯನ್ನು ಏನಾದರೂ ಮಾಡಿ ಕಡಿಮೆ ದರದಲ್ಲಿ ಸರ್ಕಾರದ ಏಜೆನ್ಸಿ ಮೂಲಕ ಸ್ವಾದೀನ ಮಾಡಿಕೊಳ್ಳುವುದು. ನಂತರ ಅದನ್ನು ಸೈಟ್ ಆಗಿ ಕನ್‌ವರ್ಟ್ ಮಾಡಿ ಮತ್ತೊಂದು ಮಾಡಿ ಲಾಭ ಗಳಿಸುವುದು. ಆ ದಿನ ನಾನು ತಮಗೆ ಬ್ರೋಚರ್ಸ್ ತೋರಿಸಿ ಹೇಳಿದೆ ಅಲ್ಲವೆ? ರಸ್ತೆ ಮಾಡುತ್ತೇನೆಂದು ಹೇಳುವವರು, ರಿಯಲ್ ಎಸ್ಟೇಟ್ ಇನ್ ನೈಸ್ ಕಂಪನಿ ಎಂದು ಅಡ್ವರ್ಟೈಸ್ ಮಾಡಿ 60 x 40ಕ್ಕೆ ಇಂತಿಷ್ಟು ಸೈಟ್ಸ್, 50 x 40 ಇಂತಿಷ್ಟು ಸೈಟ್ಸ್ ಎಂದು ಅಡ್ವರ್ಟೈಸ್ ಮಾಡಿ ಅದು ಅವ್ಯಾಹತವಾಗಿ ನಡೆಯುತ್ತದೆ. ಅದು ನಿಲ್ಲಲಿಲ್ಲ. ಸರ್ಕಾರ ಅದೇಶ ಆಗಿದೆ ಎಂದು ನಾವು ಸಮಾಧಾನ ಪಟ್ಟುಕೊಂಡಿದ್ದು ಬಿಟ್ಟರೆ ಬೇರೆ ಏನು ಆಗಿಲ್ಲ. ಇಂಪ್ಲಿಮೆಂಟೇಷನ್ ಈ ಸರ್ಕಾರ ಮಾಡಿಲ್ಲ. ನಾನು ಆ ದಿವಸ ಹೇಳಿದ್ದೆ. ನೀವು ಅಲೈನ್‌ಮೆಂಟ್‌ಗೆ ಇಷ್ಟು, ಬೌನ್‌ಷಿಪ್‌ಗೆ ಇಷ್ಟು, ಇಂಟರ್ ಚೇಂಜ್ ಏರಿಯಾಕ್ಕೆ ಇಷ್ಟು, ಎಂದು ತಾವೇನು ಜಮೀನುಗಳನ್ನು ಮಾಡಿದಿರಿ, ಇಂಟರ್ ಚೇಂಜ್ ಏರಿಯಾದಿಂದ ಹೊರಗಡೆ ಇರುವ ಜಮೀನುಗಳನ್ನು ಇವತ್ತು

ಇವರು ಹೋಗಿ ಫೆನ್ಸಿಂಗ್ ಮಾಡಲಿಕ್ಕೆ ಶುರು ಮಾಡಿದ್ದಾರೆ. ನನಗೆ ಇವತ್ತು ಇಲ್ಲಿ ನಿಂತುಕೊಂಡು ಹೇಳಬೇಕಾಗಿರುವುದು 2003ನೇ ಇಸವಿಯಲ್ಲಿ ಕೋರ್ಟ್ ಮುಂದೆ ಸ್ಟೇಟಸ್ ಕೋ ಮೈನ್‌ಟೇನ್ ಮಾಡಿ ಎನ್ನುವ ಅದೇಶ ಒಂದು ಇದೆ. ಈವತ್ತು ಆ ಸ್ಟೇಟಸ್ ಕೋ ಮೈನ್‌ಟೇನ್ ಮಾಡಿ ಎಂದು ಹೇಳಿ ಆ ಜಮೀನನ್ನು ನಮ್ಮ ಪೊಜಿಷನ್‌ನಲ್ಲಿ ಇತ್ತು ಎಂದು ಪ್ರೂವ್ ಮಾಡುವುದಕ್ಕೆ ಇವತ್ತು ಫಿನ್ಸಿಂಗ್ ಮಾಡುವುದಕ್ಕೆ ಹೋಗಿದ್ದಾರೆ. ಈ ಕೆಲಸಕ್ಕೆ ಪೋಲಿಸರ ರಕ್ಷಣೆ ತೆಗೆದುಕೊಂಡು ಹೋಗಿದ್ದಾರೆ. ಗೂಂಡಾಗಳ ರಕ್ಷಣೆ ತೆಗೆದುಕೊಂಡು ಹೋಗಿದ್ದಾರೆ. ಕೆ.ಸಿ.ರೆಡ್ಡಿಯವರ ವರದಿಯಲ್ಲಿ ಸ್ಪಷ್ಟವಾಗಿದೆ. Even if it is taken, ಒಂದು ಪಕ್ಷ ತೆಗೆದುಕೊಂಡಿದ್ದರೂ ಕೂಡ ತಜ್ಞರ ಸಮಿತಿ ಈಗ ಅಭಿಪ್ರಾಯ ಕೊಟ್ಟರೆ ಅದು ಅಗತ್ಯವಿಲ್ಲವೆಂದು ಆಚೆಗೆ ಬಿಡಬೇಕು ಎಂದು ಇದೆ. It is their own decision. ನಾನು ಪ್ರಶ್ನಿಸುವುದಿಲ್ಲ. The affidavit filed before the High Court of Karnataka, it is the decision of this Government, Cabinet, which is filed through the chief Secretary of the Government of Karnataka. ಇಷ್ಟೆಲ್ಲಾ ಇದ್ದರೂ, ಇದನ್ನು ಘನತೆ ಇರುವವರು ಯಾರಾದರೂ ನೋಡಬೇಕಾಗುತ್ತದೆ, The State Government has since noticed certain facts and circumstances that reveal fraud and misrepresentation. Further, certain questions were raised on the floor of the Assembly pursuant to which a committee was constituted by the Government headed by Sri K.C. Reddy who was the Secretary to Government, PWD. After detailed discussion on cabinet reaffirmed support of Government to the project. ನಾನೂ ವಿರೋಧ ಮಾಡುವುದಿಲ್ಲ, ನಮ್ಮನ್ನು ತಪ್ಪಾಗಿ ಅರ್ಥೈಸುವುದು ಬೇಕಾಗಿಲ್ಲ. ನಾನು ಯಾವತ್ತು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್‌ಗೆ ವಿರೋಧಿಯಲ್ಲ. ನೈಸ್ ಕಂಪನಿಯವರು ರಸ್ತೆ ಮಾಡುವುದನ್ನು ಯಾವ ಹಂತದಲ್ಲೂ ನಾನು ವಿರೋಧಮಾಡಿ ಮಾತನಾಡಿಲ್ಲ. However, in view of criticism regarding acquisition of more lands then necessary..

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರು ಈ ವಿಚಾರವನ್ನು ಇವತ್ತು ನಿಲುವಳಿ ಸೂಚನೆಯ ರೂಪದಲ್ಲಿ ತಂದಿದ್ದಾರೆ. ಆದರೆ ಇಲ್ಲಿ ಬಂದಿರತಕ್ಕ ಪ್ರಶ್ನೆ ಏನೆಂದರೆ, ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸಲು ತಮ್ಮ ಮನವೊಲಿಸಲಿಕ್ಕೆ ಬೇಕಾಗಿರತಕ್ಕಂಥ ವಿಷಯಗಳನ್ನು ಮಾತ್ರ ಹೇಳಬೇಕು. ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಿ

ಅದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ತಮ್ಮ ಮನವೊಲಿಸಲಿಕ್ಕೆ ಬೇಕಾಗಿರತಕ್ಕಂಥ ವಿಷಯಗಳನ್ನು ಪ್ರಸ್ತಾಪಿಸಬೇಕೇ ವಿನಹ ಈ ವಿಚಾರದ ಬಗ್ಗೆ ಇರುವ ಸಾಧಕಬಾಧಕಗಳಾಗಲಿ, ಅಥವಾ ಆಗಿರುವಂಥ ದೋಷಗಳಾಗಲಿ ಅದನ್ನು ತಾವು ಒಪ್ಪಿಗೆ ಕೊಡುವವರೆವಿಗೂ ಅದನ್ನು ಮಾತನಾಡುವುದಕ್ಕೆ ಬರುವುದಿಲ್ಲ. ಅಫಿಡೆವಿಟ್‌ಗಳನ್ನು ಉದಾಹರಣೆ ಕೊಟ್ಟು ಹೇಳುವುದಾಗಲಿ, ನಾನು ಮುಂದೆ ಇದು ಸಬ್‌ಜ್ಯೂಡೀಸ್ ಆಗುತ್ತದೆಂದು ತೆಗೆದುಕೊಳ್ಳುವಂಥದ್ದೂ ಕೂಡ ಇದೆ. ಇವತ್ತು ನಾವು ಅಫಿಡೆವಿಟ್‌ನ್ನು ಹೈಕೋರ್ಟಿನಲ್ಲಿ ಹಾಕಿದ್ದೇವೆ. ಈಗ ಅದು ಹೈಕೋರ್ಟಿನಲ್ಲಿ ಪ್ರಸ್ತಾಪಿಸಲ್ಪಟ್ಟಿರತಕ್ಕ ವಿಷಯವಾಗಿದೆ. ಹಾಗೆ ಪ್ರಸ್ತಾಪಿಸಲ್ಪಟ್ಟಿರುವ ವಿಷಯವನ್ನು ಮತ್ತೆ ಚರ್ಚಿಸಲು ಅಗತ್ಯ ಇಲ್ಲ. ಎರಡನೇಯದಾಗಿ ತಾವು ಅದಕ್ಕೆ ಒಪ್ಪಿಲ್ಲ. ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಿಲ್ಲ ಮತ್ತು ಅವರು ಆ ವಿಚಾರದಲ್ಲಿ ಚರ್ಚೆ ಮಾಡಿ ಎಂದು ತಾವು ಹೇಳಿಲ್ಲ. ಈ ವಿಚಾರದಲ್ಲಿ ಅವರು ಬರೆದಿರುವ ನಿಲುವಳಿ ಸೂಚನೆ ಕೂಡ, ಬೆಂಗಳೂರು ಸುತ್ತ ಹಾಗೂ ಬೆಂಗಳೂರಿನಲ್ಲಿ ಭೂಸ್ವಾಧೀನ ಪ್ರಕ್ರಿಯೆಯ ಬಗ್ಗೆ ಹಾಗೂ ಹೆಚ್ಚುವರಿ ಸ್ವಾಧೀನದ ಭೂಮಿಯನ್ನು ಇತ್ಯರ್ಥಪಡಿಸಲು ಸರ್ಕಾರ ನೇಮಿಸಿರುವ ಪರಿಣಿತರ ಸಮಿತಿಯ ವರದಿ ಹಾಗೂ ತದನಂತರ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆ ನೀಡಿದ್ದು ಚರ್ಚೆಗೆ ಅವಕಾಶ ಕೋರುತ್ತೇವೆಂದು ಹೇಳಿದ್ದಾರೆ. ತಾವು ಇದಕ್ಕೆ ಒಪ್ಪಿಗೆ ಕೊಟ್ಟಿದ್ದೀರೋ ಇಲ್ಲವೊ ಎಂಬುದು ಸದನಕ್ಕೆ ಹಾಗೂ ನಮಗೆ ಗೊತ್ತಿಲ್ಲ. ಅದಕ್ಕೆ ಒಪ್ಪಿಗೆ ಕೊಟ್ಟ ನಂತರ ಅವರು ಆ ವಿಚಾರ ಎತ್ತಿದರೆ ನಾವು ಅದರ ಬಗ್ಗೆ ಮಾತನಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಮೊದಲು ನಿಮಗೆ ಒಪ್ಪಿಸಿದ ನಂತರವೇ ಇದರ ಬಗ್ಗೆ ಚರ್ಚೆ ಮಾಡಲು ವಿಫಲವಾದ ಅವಕಾಶವನ್ನು ಕೊಡಲೆಂಬ ಉದ್ದೇಶದಿಂದ ನಿಮ್ಮನ್ನು ಕನ್ವೆನ್ಸ್ ಮಾಡುವುದಕ್ಕೆ ನಾನು ಹೊರಟಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದರೆ, ಇದು ಸಬ್‌ಜ್ಯುಡಿಸ್ ಎಂದು ಹೇಳಿಲ್ಲ. ಆದರೆ, ಈ ವಿಷಯ ಕೋರ್ಟಿನಲ್ಲಿರುವುದರಿಂದ ಇದು ಇಲ್ಲಿ ಚರ್ಚೆಗೆ ಬರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅನುಸೂಚಿತವಾಗಿ ಹೇಳಿದ್ದಾರೆ. ಆದ್ದರಿಂದ, ಆ ಒಂದು ಚೌಕಟ್ಟಿನೊಳಗೆ ಇದನ್ನು ಪ್ರಸ್ತಾಪಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯವನ್ನು ಇಲ್ಲಿ ನಿಂತುಕೊಂಡು ಮಾತನಾಡುವುದಕ್ಕಿಂತ ಮುಂಚಿತವಾಗಿಯೇ, ಅಂದರೆ ಇದನ್ನು ಪ್ರಸ್ತಾಪ ಮಾಡಿದರೆ ಸಬ್‌ಜ್ಯುಡಿಸ್ ಅಥವಾ ಕಂಟೆಮ್ಟ್ ಆಗುತ್ತದೆಯೇ ಮತ್ತು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡಬೇಕು ಮತ್ತು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬಾರದೆಂಬ ಬಗ್ಗೆ ನಿನ್ನೆ ರಾತ್ರಿಯೆಲ್ಲಾ ವಿಚಾರ ಮಾಡಿ ಇವತ್ತು ಪ್ರಸ್ತಾಪ ಮಾಡುವುದಕ್ಕೆ ನಾನು ನಿಂತಿದ್ದೇನೆ. I am prepared to face the risk, ಸಬ್‌ಜ್ಯುಡಿಸ್ ಆಗುವಂಥ ಮೆರೀಟ್ ಆಫ್ ಕೇಸ್ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ಆದರೆ, ಸರ್ಕಾರ ತೆಗೆದುಕೊಂಡಿರತಕ್ಕಂಥ ನಿರ್ಧಾರಗಳ ಬಗ್ಗೆ ಪೂರಕವಾಗಿ ಒಂದೆರಡು ಲೈನ್‌ಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ಅದನ್ನೇ ಕೇರ್‌ಫುಲ್ ಆಗಿ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಈ ವಿಷಯವನ್ನು ಬ್ರೀಫ್ ಮಾಡತಕ್ಕಂಥ ಸಮಯದಲ್ಲಿ ಮಾನ್ಯ ಸಚಿವರು ಏಕೆ ಅಡ್ಡಿ ಮಾಡುತ್ತಿದ್ದಾರೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಸಬ್‌ಜ್ಯುಡಿಸ್ ಆಗುವುದರಿಂದ ಈ ವಿಚಾರವನ್ನು ಮಾತನಾಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ತೀರ್ಮಾನ ತೆಗೆದುಕೊಂಡು ಚರ್ಚೆಗೆ ಅವಕಾಶ ಕೊಡತಕ್ಕಂಥದ್ದು ಅಥವಾ ಡಿಸ್‌ಅಲೌ ಮಾಡತಕ್ಕಂಥ ತಮಗೆ ಬಿಟ್ಟಿರತಕ್ಕಂಥ ವಿಷಯ. ತಾವು ಯೋಚನೆಮಾಡಿ ಇದರ ಬಗ್ಗೆ ನಿಲುವಳಿ ಸೂಚನೆ ತಂದಿದ್ದೇನೆಂದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. I am prepared to face the consequences; There won't be any consequences at all. It is the privilege of any member to do that. There won't be any consequences.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, I will not touch about things pertaining to the court sir ಕೋರ್ಟ್ ವಿಷಯಕ್ಕೆ ಸಂಭಂಧಪಟ್ಟಂತೆ ಒಂದೇ ಒಂದು ಪದವನ್ನು ನಾನು ಇಲ್ಲಿ ಬಳಸುವುದಿಲ್ಲ. I am referring the matter to the decision of the expert panel committee and subsequent cabinet decision.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಮಾಧುಸ್ವಾಮಿಯವರೆ, ನಾನು ನಿಮಗೆ ಸಹಾಯ ಮಾಡುವುದಕ್ಕೆ ನಿಂತುಕೊಂಡಿದ್ದೇನೆ. ನಿಲುವಳಿ ಸೂಚನೆಗೆ ಪ್ರಾಸ್ತಾವಿಕವಾಗಿ ಮನವಿಯನ್ನು

ಸಲ್ಲಿಸಿದಾಗ ಮೆಟೀರಿಯಲ್ ಫ್ಯಾಕ್ಟ್ಸ್ ಮತ್ತು ಮೆಟೀರಿಯಲ್ ಪರ್ಟಿಕ್ಯುಲರ್ಸ್ ಎಂದು ಎರಡು ಕೆಟೆಗರಿಗಳು ಬರುತ್ತವೆ. ನೀವು ಮೆಟೀರಿಯಲ್ ಫ್ಯಾಕ್ಟ್ಸ್‌ನ್ನು ಸಬ್‌ಮಿಟ್ ಮಾಡಿ ಅಧ್ಯಕ್ಷರ ಮನವೊಲಿಸಿ ಅವರು ಒಪ್ಪಿಗೆ ಕೊಟ್ಟರೆ ಮಾತ್ರ ಮೆಟೀರಿಯಲ್‌ಗೆ ಪರ್ಟಿಕ್ಯುಲರ್ಸ್‌ಗೆ ಬರಬಹುದು. ಮಾನ್ಯ ಪ್ರಕಾಶ್‌ರವರು ಪ್ರಸ್ತಾಪ ಮಾಡಿರತಕ್ಕಂಥ ಅಂಶ ಏನೆಂದರೆ, you, in the guise of raising material facts, ಆದರೆ, ನೀವು ಮೆಟೀರಿಯಲ್ ಪರ್ಟಿಕ್ಯುಲರ್ಸ್‌ಗೆ ಬರುತ್ತಿದ್ದೀರಿ ಎಂದು kindly bear with me. ಜನರಲ್ ಆಗಿ ನಾವು ಒಂದು ಕ್ರಿಮಿನಲ್ ಪಿಟಿಷನ್ ಹಾಕಬೇಕಾದರೆ ಅಲಾಂಗ್ ವಿತ್ ದಿ ಪಿಟಿಷನ್ ಮೆಟೀರಿಯಲ್ ಪರ್ಟಿಕ್ಯುಲರ್ಸ್‌ನ್ನು ಫೈಲ್ ಮಾಡಬೇಕಾಗುತ್ತದೆ. ಮತ್ತೆ ಸಿವಿಲ್ ಮ್ಯಾಟರ್‌ನಲ್ಲಿ ಏನು ಮಾಡುತ್ತೇವೆಂದರೆ, after framing issues, at the time of evidence, we go for material particulars. You must clarify, whether you are trying to convince the Chair by placing the material facts or in the guise of placing material facts are you trying to reach materials particulars. If that is so, as the Hon`ble Minister Mr.M.P. Prakash says, it is objectionable.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, 100 ಪರ್ಸೆಂಟ್ ನಾನು ಮೊದಲೇ ಹೇಳಿದ ಹಾಗೆ I have no documents of the expert committee panel ಆ ಒಂದು ಡಾಕ್ಯುಮೆಂಟ್ಸ್ ಆಧಾರದ ಮೇಲೆ ಏನು ಅಫಿಡೆವಿಟ್ ಆಗಿರತಕ್ಕಂಥದರಲ್ಲಿ ಸರ್ಕಾರದ ತೀರ್ಮಾನ ಈ ರೀತಿಯಾಗಿದೆ ಎಂಬುದನ್ನು ಉಲ್ಲೇಖ ಮಾಡಿರತಕ್ಕಂಥದನ್ನು ಬಿಟ್ಟರೆ I am not going into the details. ಆದರೆ, ಈ ಸಂಧರ್ಭದಲ್ಲಿ ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಸರ್ಕಾರ ತೆಗೆದುಕೊಂಡಿರತಕ್ಕಂಥ ತೀರ್ಮಾನದ ವಿರುದ್ಧವಾಗಿ, ಇದೇ ಸರ್ಕಾರದ ಕೆಳಗಡೆಯ ಆಡಳಿತ ಇವತ್ತಿನ ದಿವಸ ನಡೆಯುತ್ತಿದೆ. ಮತ್ತೆ ಎಕ್ಸ್‌ಸ್ ಜಮೀನನ್ನು ನಾವು ರೈತರಿಗೆ ಬಿಟ್ಟುಕೊಡುತ್ತೇವೆಂದು ಈ ಸರ್ಕಾರ ಒಪ್ಪಿದೆ. ಆದರೆ, ರೈತರಿಗೆ ಅಥವಾ ಇನ್ಯಾರಿಗೆ ಬಿಟ್ಟು ಕೊಡುತ್ತೀರಿ ಎನ್ನತಕ್ಕಂಥ ಮೆರಿಟ್‌ಗೆ ನಾನು ಹೋಗುವುದಿಲ್ಲ. ಆದರೆ, ಕಳೆದ ವಾರದಲ್ಲಿ ಅಲ್ಲಿ ಬಿಟ್ಟು ಕೊಡತಕ್ಕಂಥ ಜಾಗಗಳಿಗೆ ಸರ್ಕಾರದ ಅಧಿಕಾರಿಗಳು ಮತ್ತು ಪೋಲಿಸ್‌ನವರು ಅಲ್ಲಿಗೆ ಹೋಗಿ ನಿಂತುಕೊಂಡು ಆ ಜಾಗಕ್ಕೆ ಫೆನ್ಸಿಂಗ್ ಮತ್ತು ಅದನ್ನು ಎವಿಕ್ಟ್ ಮಾಡತಕ್ಕಂಥ ಕೆಲಸ ಮಾಡುತ್ತಿದ್ದಾರೆ. ನಾನು ಈಗ ತಮಗೆ ಕನ್‌ವಿನ್ಸ್ ಮಾಡುವುದೇನೆಂದರೆ,

ಇದು ಅಲೈನ್‌ಮೆಂಟ್ ಏರಿಯಾದಲ್ಲಿ ಬರುವುದಿಲ್ಲ. ಮತ್ತೆ ಸರ್ಕಾರದವರೇ ಒಪ್ಪಿ ಮಾಡಿರತಕ್ಕಂಥ ಸಮಿತಿ ನೀಡಿರತಕ್ಕಂಥ ವರದಿಯಲ್ಲಿಯೂ ಕೂಡ ಆ ಪರ್ಯಾಯಿಂದ ಆಚೆ ಇದೆ. ಅದಕ್ಕೋಸ್ಕರ ನೀವು ಅದನ್ನು ತೆಗೆದುಕೊಳ್ಳ ಬಾರದಾಗಿತ್ತು. When you have accepted the fact, in principle, and through a Government Order. ಈ ರೀತಿಯಾದ ಕೃತ್ಯವನ್ನು ತಾವೇಕೆ ಮಾಡುತ್ತಿದ್ದೀರಿ? ಮತ್ತೆ ರೈತರ ಜಮೀನಿಗೆ ತಾವು ಹೋಗಿ ಏಕೆ ಬೇಲಿ ಹಾಕುತ್ತಿದ್ದೀರಿ? ಹಾಗೆಯೇ, ಇದನ್ನು ಏಕೆ ವಶ ಮಾಡಿಕೊಳ್ಳುವುದಕ್ಕೆ ಹೋಗಿದ್ದೀರಿ? ಮತ್ತೆ ಇದನ್ನು ಏಕೆ ಬಿಡಲಿಲ್ಲ? ಹಾಗೆಯೇ, ಒರಿಜಿನಲ್ ಅಲೈನ್‌ಮೆಂಟ್‌ಗೆ ಏಕೆ ಸ್ಟಿಕ್ ಆನ್ ಆಗಲಿಲ್ಲ ಎನ್ನತಕ್ಕಂಥದ್ದನ್ನು ನಾನು ಕನ್‌ವಿನ್ಸ್ ಮಾಡುವುದಕ್ಕೆ ಹೊರಟಿದ್ದೇನೆ. ತಾವು ಮುಗಿಸಿ ಎಂದರೆ ನಾನು ಇಷ್ಟಕ್ಕೇ ನನ್ನ ಮಾತನ್ನು ಮುಗಿಸುತ್ತೇನೆ. ಮತ್ತೆ ಅವಕಾಶ ಕೊಡುವುದಾದರೆ ಕೊಡಿ. ನನ್ನ ಉದ್ದೇಶ ಏನೆಂಬುದನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ನಮ್ಮ ಮಾತು ಕೇಳಿ ನಿಜವಾಗಿಯೂ ಕೂಡ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದೆ. There is no second thought. ಆದರೆ. ಅವರ ಪ್ರೆಸ್ಟೀಜ್‌ಗೆ ಇಲ್ಲಿ ಧಕ್ಕೆಯಾಗುತ್ತದೆಂಬ ಉದ್ದೇಶದಿಂದೇನೋ ಅವರು ಅಸೆಂಬ್ಲಿಯಲ್ಲಿ ಒಪ್ಪಲಿಲ್ಲ. ಆದರೆ, ಅವರು ಅಫಿಡೆವಿಟ್‌ನಲ್ಲಿ ಏನು ಹೇಳಿದ್ದಾರೆಂದರೆ, In accordance with the investigation of the P.I.L.ಇದನ್ನು ನಾನೇನೂ ಹೇಳುತ್ತಿಲ್ಲ. ಪಿಐಎಲ್ ಹಾಕಿದಮೇಲೆ ನಾವು ಮಾಡಿರತಕ್ಕಂಥ ಇನ್‌ವೆಸ್ಟಿಗೇಶನಲ್ಲಿ ಈ ಫ್ಯಾಕ್ಟ್ಸ್ ರಿವೀಲ್ ಆಗಿದೆ ಎಂದು ಅವರು ಹೇಳಿರತಕ್ಕಂಥದನ್ನು ನಾನು ಕೇಳಿದ್ದೇನೆ. ನಾವು ಮಾತನಾಡಿರತಕ್ಕಂಥ ಅನೇಕ ವಿಷಯಗಳನ್ನು ಅವರು ಮನನ ಮಾಡಿಕೊಂಡಿದ್ದಾರೆ. ಹಾಗೆಯೇ ಇವುಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. I am glad. Government is Government. ಸರ್ಕಾರ ಎಲ್ಲರಿಗೂ ನಡೆಯಬೇಕಾಗಿದೆ. ಯಾರಾದರ ಹೇಳಿದರೆ ತಿದ್ದುಕೊಳ್ಳುತ್ತೇವೆ ಎಂಬ ಸ್ಥಿತಿಗೆ ಬಂದಿದ್ದೀರಿ. ಅಥವಾ ಯಾರದ್ದಾದರೂ ಒತ್ತಾಯಕ್ಕಾದರೂ ಬಂದಿದ್ದೀರಿ. ಇದನ್ನು ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆ ತೀರ್ಮಾನ ಏನಾಗಿದೆ ಎಂದರೆ, ಅದರ ಅನ್ವಯ ಕಾರ್ಯಕ್ರಮ ಆರಂಭವಾಗಬೇಕು. ಎರಡನೆಯದು ಇಲ್ಲಿ ಏನಾಗಿದೆ ಎಂದರೆ, ಇಲ್ಲಿ ಬೇರೆ ಬೇರೆ ಕೆಲಸ ಆರಂಭವಾಗಿದೆ. ಅಂದರೆ, ಇವರು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆಂದು ಅವರು ಹೇಳುವುದು ಮತ್ತು

ಅವರು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆಂದು ಇವರು ಹೇಳತಕ್ಕಂಥದ್ದು ನಡೆಯುತ್ತಿದೆ. There I have a point.

ಅಧ್ಯಕ್ಷರು : ನೈಸ್ ಕಂಪನಿಯವರು ಜಾಸ್ತಿ ಒತ್ತುವರಿ ಮಾಡಿರತಕ್ಕಂಥದರ ಬಗ್ಗೆ ತನಿಖೆ ಮಾಡಲು ಒಂದು ಕಮಿಟಿ ಮಾಡಿದ್ದಾರೆಂದು ತಾವು ಹೇಳುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೌದು.

ಅಧ್ಯಕ್ಷರು : ಮತ್ತೆ ಅವರು ಒತ್ತುವರಿ ಮಾಡಿದ್ದಾರೆ ಮತ್ತು ಇವರು ಒತ್ತುವರಿ ಮಾಡಿದ್ದಾರೆಂದು ತಾವು ಹೇಳಿದ್ದೀರಿ. ಆದ್ದರಿಂದ ಯಾರು ಒತ್ತುವರಿ ಮಾಡಿದ್ದಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ದೇವೇಗೌಡರು ಒತ್ತುವರಿ ಮಾಡಿದ್ದಾರೆಂದು ಇವರು ಹೇಳುತ್ತಿದ್ದಾರೆ. ಮತ್ತೊಬ್ಬರು with due respects ಮಾನ್ಯ ಅಶೋಕ್‌ರವರ ಹೆಸರೂ ಕೂಡ ಪ್ರಸ್ತಾಪ ಮಾಡಿದರು.

MR. SPEAKER : It is all appeared in papers. ಅವರು ಹೇಳಿದರು ಇವರು ಹೇಳಿದರು ಎನ್ನತಕ್ಕಂಥದ್ದು ಬೇಡ. ಯಾರ್ಯಾರು ಒತ್ತುವರಿ ಮಾಡಿದ್ದಾರೆ ಎನ್ನತಕ್ಕಂಥ ದಾಖಲೆಗಳು ಏನಾದರು ನಿಮ್ಮ ಹತ್ತಿರ ಇವೆಯೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ನನಗೆ ಅವಕಾಶ ಕೊಟ್ಟರೆ ನಾನು ಎಲ್ಲವನ್ನೂ ಹೇಳುತ್ತೇನೆ.

ಅಧ್ಯಕ್ಷರು : ಯಾರಾದರೂ ಬೇರೆ ಬೇರೆಯವರು ಒತ್ತುವರಿ ಮಾಡಿದ್ದರೆ ಅಂಥ ವಿಷಯಗಳನ್ನು ಇಲ್ಲಿ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಸಿದ್ಧನಿದ್ದೇನೆ. ಮೊದಲು ನಿಮಗೆ ಕನ್‌ವಿನ್ಸ್ ಮಾಡುತ್ತಿದ್ದೇನೆ. ಚರ್ಚೆ ಮುಂದುವರಿಸಿ ಎಂದರೆ ನನ್ನದೇನೂ ತಕರಾರು ಇಲ್ಲ. ನಾನು ತಂದಿರತಕ್ಕಂಥ ನಿಲುವಳಿ ಸೂಚನೆಗೆ ತಾವು ಅಲೌ ಮಾಡಬೇಕು. ಇದರ ಬಗ್ಗೆ ಬಹಳಷ್ಟು ವಿಷಯಗಳು ಚರ್ಚೆಯಾಗಬೇಕಾಗಿದೆ. ಮತ್ತು ಇದು ಬಹಳ ಗಹನವಾದ ವಿಚಾರವಾಗಿದೆ. ಆದ್ದರಿಂದ ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು : ನಿಯಮ 69ರ ಅಡಿಯಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ನಾನು ಅವಕಾಶ ಕೊಡುತ್ತೇನೆ. ಮತ್ತೆ ಇದನ್ನು ಏತಕ್ಕಾಗಿ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇನೆಂದರೆ, ಮಾನ್ಯ ಮಾಧುಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ಸುತ್ತಮುತ್ತ ಆಗಿರತಕ್ಕಂಥ ಒತ್ತುವರಿ ಬಗ್ಗೆ

ಹೇಳಿದ್ದಾರೆ. ಮತ್ತೆ ಕಂದಾಯ ಮಂತ್ರಿಗಳು ಒಂದುಸಾರಿ ಉತ್ತರ ಕೊಡುವಂಥ ಸಂದರ್ಭದಲ್ಲಿ ಸುಮಾರು ಮೂರು ಸಾವಿರ ಚಿಲ್ಲರೆ ಎಕರೆ ಒತ್ತುವರಿಯಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆ ಸ್ಪಷ್ಟವಾದ ದಾಖಲೆಗಳು ನಿಮ್ಮ ಹತ್ತಿರ ಇದ್ದಲ್ಲಿ ಚರ್ಚೆಗೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಹಾಗೆಯೇ, ಇದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದೇನೆ. ಆನಂತರ, ಇದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಈಗಲೇ ಪ್ರಸ್ತಾಪ ಮಾಡಲೇ ಅಥವಾ ಆನಂತರ ಪ್ರಸ್ತಾಪ ಮಾಡಲೆ?

ಅಧ್ಯಕ್ಷರು : ತಾವು ಆನಂತರ ಈ ವಿಷಯವನ್ನು ಪ್ರಸ್ತಾಪ ಮಾಡಿ. ಈ ವಿಷಯವನ್ನು ಆನಂತರ ತೆಗೆದುಕೊಳ್ಳುತ್ತೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) **ವಿಷಯ** : ಆಂಧ್ರಪ್ರದೇಶ ಕೃಷ್ಣಾ ಬೇಸಿನ್‌ನಲ್ಲಿ ಕಾನೂನು ಬಾಹಿರವಾಗಿ ಯೋಜನೆಗಳನ್ನು ತೆಗೆದುಕೊಂಡಿರುವ ಬಗ್ಗೆ .

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದ ನೆಲ ಜಲದ ಪ್ರಶ್ನೆಯಾಗಿದೆ. ನಿನ್ನೆ ದಿವಸ ಅರ್ಧಕ್ಕೆ ಚರ್ಚೆಯನ್ನು ನಿಲ್ಲಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಮ್ಮತದ ನಿರ್ಣಯವಾಗಬೇಕೆಂದು ನಾವು ಹೇಳಿದ್ದೇವೆ. ಆದರೆ, ಸರ್ಕಾರ ಈಗ ಮೌನವಾಗಿ ಕುಳಿತರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಿಯಮ 69 ರ ಅಡಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ನಾನು ಅನಂತರ ಸಮಯ ಕೊಡುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ ಮೇಲೂ ಕೂಡ ತಾವೇಕೆ ಈಗ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳತಕ್ಕಂಥ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಕೃಷ್ಣಾ ಗೋದಾವರಿ ನೀರಿನ ವಿಷಯದ ಬಗ್ಗೆ ಕೇಳುತ್ತಿದ್ದೇನೆ. ಇವತ್ತಿನದಿವಸ ಆಂಧ್ರಪ್ರದೇಶದ ಸರ್ಕಾರ ಅನಧಿಕೃತವಾಗಿ 4480 ಕೋಟಿ ರೂಪಾಯಿಗಳ ಅಂದಾಜಿನ ಕಾಮಗಾರಿಯನ್ನು ಪ್ರಾರಂಭ ಮಾಡಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಫ್ಲೋರ್ ಲೀಡರ್ಸ್ ಜೊತೆಗೆ ಮಾನ್ಯ ಸ್ಪೀಕರ್‌ರವರ ಕೊಠಡಿಯಲ್ಲಿ ಸಭೆ